**ದಾವೆ- 86/2019** **ಪಿಡಬ್ಲ್ಯೂ-1**

**ದಿನಾಂಕ -27.07.2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು- 1 ನೇ ಪ್ರತಿವಾದಿ ಪರ ಶ್ರೀ ಸಿ.ಎನ್.ಎಂ ವಕೀಲರವರಿಂದ**

ಮುನ್ಸಿಫ್ ನ್ಯಾಯಾಲಯ ರಾಯಚೂರಿನಲ್ಲಿ ಅಸಲು ದಾವೆ 167/1982 ಮತ್ತು 18/1984 ಗಳಲ್ಲಿನ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ? ಸಾಕ್ಷಿ ನನಗೆ ಮಾಹಿತಿ ಇದ್ದ ಪ್ರಕಾರ ಅಸಲು ದಾವೆ ನಂ.18/1984 ತೀರ್ಪಿನ ಮೇಲೆ ಮೆಲ್ಮನವಿ ಮಾಡಿಲ್ಲ ಆದರೆ ಇನ್ನೊಂದು ದಾವೆ ಕುರಿತು ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. 2 ದಾವೆಗಳು ವಜಾ ಆದ ಬಗ್ಗೆ ಮಾಹಿತಿ ಇದ್ದರು ಅ ವಿಷಯ ಹೇಳಲು ತಪ್ಪಿಸುವ ಸಲುವಾಗಿ ಈಗ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಯರಮರಸ್ ದಂಡ ಸ್ವತ್ತಿಗೆ ಸ.ನಂ. ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅ ಸ್ವತ್ತಿಗೆ ಸ.ನಂ. ಇರುವುದರಿಂದ ದಾವ ಸ್ವತ್ತಿಗೆ ಸ.ನಂ. ಇದೆ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿಗೆ ಸ.ನಂ. ಇದೆ ನಾನು ಅ ಸ್ವತ್ತನ್ನು ಖರೀದಿ ಮಾಡಿಲ್ಲ ಆದ್ದರಿಂದ ಸ.ನಂ. ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ನನ್ನ ಮುತ್ತಜ್ಜ ಖರೀದಿ ಮಾಡಿದ ಆಸ್ತಿ ಎಂದರೆ ಸರಿ. ನನ್ನ ಮುತ್ತಜ್ಜ ಖರೀದಿ ಮಾಡಿದ ಸ್ವತ್ತಿಗೆ ಸ.ನಂ. ಇದೆ ಎಂದರೆ ಸಾಕ್ಷಿ ಅ ಸ್ವತ್ತಿಗೆ ಸ.ನಂ. ಎಲ್ಲೂ ನಮೂದು ಆಗಿಲ್ಲ ಎಂದು ಹೇಳುತ್ತಾರೆ. ದಾವ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಆದ್ದರಿಂದ ಅ ಸ್ವತ್ತಿಗೆ ಸ.ನ. ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿಗೆ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ನನ್ನ ಮುತ್ತಜ್ಜ ಖರೀದಿ ಮಾಡಿಲ್ಲ, ಅವರು ಹಾಕಿದ ದಾವೆಗಳು ಸಹ ವಜಾ ಆಗಿದ್ದರು ಸಹ ಸರಕಾರಿ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಜಿಲ್ಲಾಧಿಕಾರಿಗಳು ರಾಯಚೂರು ಇವರು ಮಾಡಿದ ಆದೇಶದ ಮೇಲೆ ಮಾನ್ಯ ಉಚ್ಚ ನ್ಯಾಯಾಲಯ ಕಲ್ಬುರ್ಗಿಯಲ್ಲಿ ಡಬ್ಲ್ಯೂಪಿ ನಂ.223621/622-2020 (ಎಲ್.ಬಿ - ಆರ್.ಇ.ಎಸ್) ರಲ್ಲಿ ಮೇಲ್ಮನವಿಯನ್ನು ನಾನು ಮತ್ತು ನನ್ನ ಚಿಕ್ಕಪ್ಪ ಸಲ್ಲಿಸಿರುತ್ತೇವೆ. ಸದರಿ ಮೇಲ್ಮನವಿಯಲ್ಲಿ ಯಾವ ಸ.ನಂ. ಬರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ನೆನಪಿಲ್ಲ. ದಾವ ಆಸ್ತಿ ಸ.ನಂ. ಬರುತ್ತದೆ ಎಂದು ಗೊತ್ತಿದ್ದರು ಅದನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಆದರೂ ಸರಕಾರಿ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಎಲ್.ಐ.ಸಿ ಕಛೇರಿಯಲ್ಲಿ ವಿಮೆ ಅಡವೈಸರ್ ಎಂದು ಕೆಲಸ ಮಾಡುತ್ತೇನೆ. ಯಾರಾದರೂ ವಿಮೆ ಮಾಡಿಸಲು ಬಂದರೆ ಅ ವ್ಯಕ್ತಿಯ ಸರಿಯಾದ ವಿಳಾಸ ಪೂರೈಸಬೇಕು ಎಂದರೆ ಸರಿ. ದಾವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅನಧಿಕೃತವಾಗಿ ದಾವ ಸ್ವತ್ತನ್ನು ಪಡೆಯಲು 1 ನೇ ಪ್ರತಿವಾದಿ ಮೇಲೆ ಮತ್ತು ನಗರಸಭೆ ಮೇಲೆ ವಿನಾಕಾರಣ ದಾವೆ ಮಾಡಿ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಆದರೂ ಸರಕಾರಿ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು- 2 ನೇ ಪ್ರತಿವಾದಿ ಪರ ಶ್ರೀ ಸಿ.ಎ.ಆರ್ ವಕೀಲರವರಿಂದ</u>**

ನ್ಯಾಯಾಲಯದಲ್ಲಿ ನಾನು ದಾವ ಸ್ವತ್ತಿನ ಮಾಲೀಕತ್ವ ಮತ್ತು ಖಾಯಂ ನಿರ್ಬಂಧಕಾಜ್ಞೆ ಕೋರಿ ದಾವೆ ಮಾಡಿರುತ್ತೇನೆ. ದಾವೆ ಮಾಡುವ ಪೂರ್ವದಲ್ಲಿ ನಗರ ಸಭೆ ಕಛೇರಿಗೆ ನೋಟಿಸನ್ನು ನೀಡಿರುವುದಿಲ್ಲ. ದಾವ ಆಸ್ತಿ ನಂ.13-7-325 ಕ್ಷೇತ್ರ 9120 ಚ.ಅ ಈ ಸ್ವತ್ತಿಗೆ ಸೇರಿದಂತೆ ಶಡ್ಯೂಲ್ನಲ್ಲಿ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಅಳತೆ ನಮೂದು ಮಾಡಿಲ್ಲ ಎಂದರೆ ಸರಿ. ರಾಮಸ್ವರೂಪ ದೀಕ್ಷಿತ ನನ್ನ ಮುತ್ತಜ್ಜ ಎಂದರೆ ಸರಿ. ವಾದ ಪತ್ರದಲ್ಲಿ ನನ್ನ ಮುತ್ತಜ್ಜ ರಾಮಸ್ವರೂಪ ದೀಕ್ಷಿತ ಇವರು 10347.20 ಚ.ಗಜ ಸ್ವತ್ತನ್ನು 1329 ಫಸಲಿಯಲ್ಲಿ ಖರೀದಿಸಿದ್ದರು ಎಂದು

ನಮೂದು ಮಾಡಿರುತ್ತೇವೆ ಎಂದರೆ ಸರಿ. ನನ್ನ ಮುತ್ತಜ್ಜ ಯಾವುದೇ ನೊಂದಾಯಿತ ಖರೀದಿ ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿ . ದಾವ ಸ್ವತ್ತಿನಲ್ಲಿ ಕಟ್ಟಡವನ್ನು ಕಟ್ಟಲು ನಿಪಿ-9 ರಂತೆ ಪರವಾನಿಗೆ ಪಡೆದಿರುತ್ತೇವೆ. ಕಟ್ಟಡ ಪರವಾನಿಗೆ ಪ್ರಮಾಣ ಪತ್ರ ಕ್ಲಾಸ 10 ಪ್ರಕಾರ ಸದರಿ ಪರವಾನಿಗೆ 1 ವರ್ಷದವರೆಗೆ ಜಾರಿ ಇರುತ್ತದೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದ ಕ್ಲಾಸ 22 ಪ್ರಕಾರ ಕಟ್ಟಡ ನಿರ್ಮಾಣದ ಅಕ್ಕ-ಪಕ್ಕದವರ ತಕರಾರು ಬಂದಲ್ಲಿ ಅದನ್ನು ನಾವೇ ಸರಿಪಡಿಸಿಕೊಳ್ಳತಕ್ಕದ್ದು ಎಂದು ಷರತ್ತು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ತಂದೆ ಮಲ್ಲಪ್ಪ ಇವರು ತಿರುಗಾಡಲು ಅಡಚಣೆ ಮಾಡುತ್ತಿದ್ದೇವೆ ಎಂದು ನಗರ ಸಭೆಗೆ ಆಕ್ಷೇಪಣೆಯನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ಆಕ್ಷೇಪಣ ಪತ್ರ ಬಂದ ನಂತರ ನಗರಸಭೆಯವರು ನನಗೆ ಸೂಚನ ಪತ್ರವನ್ನು ಹೊರಡಿಸಿ ಆಸ್ತಿಗೆ ಸೇರಿದ ಮಾಲೀಕತ್ವದ ಮೂಲ ದಾಖಲಾತಿಗಳನ್ನು ತೆಗೆದುಕೊಂಡು ಕಛೇರಿಗೆ ಹಾಜರಾಗುವಂತೆ ತಿಳಿಸಲಾಗಿತ್ತು ಎಂದರೆ ಸರಿ. ನಗರಸಭೆಯವರು ನೀಡಿದ ಸೂಚನ ಪತ್ರಕ್ಕೆ ಯಾವುದೇ ಪ್ರತ್ಯುತ್ತರ ನೀಡದೆ ಹಾಗೂ ವಿಚಾರಣೆಗೆ ಹಾಜರಾಗದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿಚಾರಣೆಗೆ ಹಾಜರಾಗದೇ ಇದುದರಿಂದ ಕಿರಿಯ ಅಭಿಯಂತರರು ನಗರಸಭೆ ಪೌರಯುಕ್ತರ ಆದೇಶದ ಮೇರೆಗೆ ದಿನಾಂಕ 03.06.2019 ರಂದು ಆದೇಶವನ್ನು ಹೊರಡಿಸಿ ಆಕ್ಷೇಪಣದಾರರ ಅರ್ಜಿಯನ್ನು ಪುರಸ್ಕರಿಸಿ ಅಡಚಣೆಯನ್ನು ತೆಗೆದುಹಾಕಲಾಯಿತು ಎಂದರೆ ಸರಿಯಲ್ಲ. ನಗರಸಭೆಯವರು ಕಾನೂನಾತ್ಮಕವಾಗಿ ಅವರ ಕೆಲಸ ನಿರ್ವಹಿಸಿದ್ದರು ನಾನು ಗೈರು ಫಯಿದೆಯಿಂದ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಅರಿ ಅಂತ ಒಪ್ಪಿಕೊಂಡಿರುತ್ತಾರೆ)**

2 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆಎಂಎಫಸಿ
ನ್ಯಾಯಾಧೀಶರು, ರಾಯಚೂರು